# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1014 |
| 02 | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ॥ ಧನಂಜಯ ಸರ್ಜಿ<br>(ಪದವೀಧರರ ಕ್ಷೇತ್ರ) |
| 03 | ಉತ್ತರಿಸುವ ದಿನಾಂಕ | : | 25.07.2024 |
| 04 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ಹೊಸದಾಗಿ ಜಾರಿಗೆ ಬಂದಿರುವ ಕಾನೂನಿಗೆ ಅನುಗುಣವಾಗಿ ತನಿಖೆ ಮಾಡಲು ಎಷ್ಟು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ: ಮಾನವ ಹಕ್ಕುಗಳ ಉಲ್ಲಂಘನೆ ತಡೆಯಲು ಎಷ್ಟು ಬಾಡಿ ಕ್ಯಾಮರಾಗಳನ್ನು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈವರೆಗೆ ನೀಡಲಾಗಿದೆ: | ರಾಜ್ಯದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಕಾನೂನಿಗೆ ಅನುಗುಣವಾಗಿ ತನಿಖೆ ಮಾಡಲು ಇದುವರೆವಿಗೂ ಒಟ್ಟು 83,669 ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.<br><br>2023–24ನೇ ಸಾಲಿನಲ್ಲಿ 1,454 ಬಾಡಿವಾರ್ನ್ ಕ್ಯಾಮರಗಳನ್ನು ಇದುವರೆವಿಗೂ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. |
| ಆ) ಹೊಸ ಕಾನೂನಿನಂತೆ ವಿಡಿಯೋ ಮಾಡಲು ಬೇಕಾದ ಯಾವ ಯಾವ ಉಪಕರಣಗಳನ್ನು ಪ್ರತಿ ಠಾಣೆಗಳಿಗೆ ಈವರೆಗೆ ಎಷ್ಟು ಹಂಚಿಕೆ ಮಾಡಲಾಗಿದೆ: | ಪ್ರತಿ ಪೊಲೀಸ್ ಠಾಣೆಗಳಿಗೆ ವಿಡಿಯೋ ಕ್ಯಾಮರ, ಡಿಜಿಟಲ್ ಕ್ಯಾಮರಗಳನ್ನು ಈಗಾಗಲೇ ಸರಬರಾಜು ಮಾಡಿದ್ದು, ಹೊಸ ಕಾನೂನು ಜಾರಿಗೆ ಬಂದ ನಂತರ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ಇವುಗಳಿಂದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಾನೂನಿನ ವ್ಯಾಪ್ತಿಯಲ್ಲಿ ವಿಡಿಯೋ ರೆಕಾರ್ಡ್‌ಗಳನ್ನು ಮಾಡಲು ಬಳಸಲಾಗುತ್ತಿದೆ. |
| ಇ) ಹೊಸ ಕಾನೂನಿನಂತೆ ಅಪರಾಧ ನಡೆದ ಸ್ಥಳಗಳನ್ನು ಹಲವು ತಂಡಗಳಲ್ಲಿ ತನಿಖೆ ನಡೆಸಲು ಎಷ್ಟು ಬ್ಯಾಟರಿ ಚಾಲಿತ ಪ್ರಿಂಟರ್‌ಗಳನ್ನು ಮತ್ತು ಲ್ಯಾಪ್‌ಟಾಪ್‌ಗಳನ್ನು ಪ್ರತಿ ಠಾಣೆಗೆ ನೀಡಲಾಗಿದೆ: | ಠಾಣೆಗಳಿಗೆ ಲ್ಯಾಪ್‌ಟಾಪ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಬ್ಯಾಟರಿ ಚಾಲಿತ ಪ್ರಿಂಟರ್‌ಗಳನ್ನು ಹಂಚಿಕೆ ಮಾಡಲಾಗಿರುವುದಿಲ್ಲ. ಎಲ್ಲಾ ಠಾಣೆಗಳಿಗೆ ಪ್ರಿಂಟರ್‌ಗಳನ್ನು ಒದಗಿಸಲಾಗಿದೆ. |
| ಈ) Hashing ಮಾಡಲು ಸಾಫ್ಟ್‌ವೇರ್ ಹಾಗೂ ಸುರಕ್ಷಿತವಾಗಿ ಡೇಟಾ ವರ್ಗಾವಣೆ ಮಾಡಲು write blocker ಎಲ್ಲಾ ಠಾಣೆಗಳಿಗೆ ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ? | Hashing ಮಾಡಲು ಸಾಫ್ಟ್‌ವೇರ್ ಹಾಗೂ ಸುರಕ್ಷಿತವಾಗಿ ಡೇಟಾ ವರ್ಗಾವಣೆ ಮಾಡಲು write blocker ಗಳನ್ನು 43 ಸಿ.ಇ.ಎನ್ ಪೊಲೀಸ್ ಠಾಣೆಗಳಿಗೆ ನೀಡಲಾಗಿದೆ. |

**ಕಡತ ಸಂಖ್ಯೆ:HD/92/EFS/2024**

(ಡಾ:ಜಿ. ಪರಮೇಶ್ವರ)
ಗೃಹ ಸಚಿವರು